AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ವಚನ ಸಾಹಿತ್ಯ : ಸ್ತ್ರೀವಾದದ ನೆಲೆಗಳು

**ರವೀಂದ್ರ ಕೆ. ವಿ.**
ಸಂಶೋದನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ
ಬೆಂಗಳೂರು–560056
ಮೊ.ನಂ : 9731565688

"ವಚನ" ಎಂದರೆ ಸಾಮಾನ್ಯಅರ್ಥದಲ್ಲಿ 'ಮಾತು' ಎಂಬ ರೂಪವಿದ್ದು ನುಡಿಗಟ್ಟಿನಲ್ಲಿ ವಚನ ಕೊಡು, ಭಾಷೆ ನೀಡು, ಪ್ರಮಾಣ ಮಾಡು, ಎಂಬ ಅರ್ಥಗಳಿವೆ. ಮಾರ್ಗ ಛಂದಸ್ಸಾದ ಚಂಪೂ ಕಾವ್ಯದಲ್ಲಿ ಗದ್ಯರೂಪಕ್ಕೆ ವಚನ ಎನ್ನಲಾಗಿದ್ದು, 12ನೇ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಕಾವ್ಯ ಲಕ್ಷಣಗಳಿಗಿಂತ ಭಿನ್ನವಾದ ಕಾವ್ಯ ಸತ್ವವನ್ನು, ತತ್ವವನ್ನು ಮೈಗೂಡಿಸಿಕೊಂಡಿದೆ. ವಚನಗಳ ದಾಟಿ ಪದ್ಯದಷ್ಟು ಬಿಗಿಯಲ್ಲ, ಗದ್ಯದಷ್ಟು ಸಡಿಲವೂ ಅಲ್ಲ. ಗದ್ಯ ಪದ್ಯ ನಡುವಿನ ಒಂದು ಮಾದರಿಯಾಗಿದೆ. ವಚನಗಳು ಲೋಕಾನಭವದಲ್ಲಿದ್ದ ಎಲ್ಲಾ ಸತ್ಯಗಳನ್ನು ಜನಸಾಮಾನ್ಯರ ಮುಂದೆ ಬಿಡಿಸಿರುವುದು ಮೂಲ ಉದ್ದೇಶವಾಗಿದ್ದು ಚಳುವಳಿಯಾಗಿ ರೂಪತಳೆದ ಕನ್ನಡ ಸಾಹಿತ್ಯ ಪ್ರಕಾರವಾಗಿದೆ. ಹನ್ನೆರಡನೇ ಶತಮಾನದಿಂದ ಇಂದಿನವರೆಗೂ ಜನಸಾಮಾನ್ಯರನ್ನು ತಲುಪಿದ ಸಾಹಿತ್ಯ ವಚನ ಸಾಹಿತ್ಯವಾಗಿದೆ. ಇದಕ್ಕೆ ಕಾರಣ ಬಳಕೆಯಾದ ಭಾಷೆ. ವಚನ ಸಾಹಿತ್ಯ ಮೂಲತಃತನ್ನ ಹಿಂದಿನ ಕಾಲಘಟ್ಟದ ಎಲ್ಲಾ ಆಶಯಗಳಿಗಿಂತ ಭಿನ್ನವಾದ ಧೋರಣೆಗಳನ್ನು ತಳೆದು ಉಗಮವಾದ ಸಾಹಿತ್ಯವಾಗಿದೆ.

ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ವಚನ ಸಾಹಿತ್ಯವು ವೈವಿಧ್ಯಮಯ ಸಾಹಿತ್ಯ ಸೃಷ್ಟಿಗೆ ಕಾರಣವಾಗಿದ್ದು ಪುನರ್ ಮೌಲೀಕರಣ–ಕ್ಕೆ ಒಕ್ಕೂವಂತಹ ಸಾಹಿತ್ಯಕ ಗುಣಗಳನ್ನು ಹೊಂದಿದೆ. ವಚನಗಳಲ್ಲಿ ಅನುಭಾವದ ಅಭಿವ್ಯಕ್ತಿ, ಸಾಮಾಜಿಕ ಒಳನೋಟ, ವೈಚಾರಿಕ ಪ್ರಜ್ಞೆ, ಸಾಂಸ್ಕೃತಿಕ ಆಯಾಮ, ಜಾನಪದ ಸತ್ವ, ಪ್ರಾಯೋಗಿಕ ಅಭಿವ್ಯಕ್ತಿ, ಪ್ರತಿಭಟನಾತ್ಮಕ ಶಕ್ತಿ, ಸ್ತ್ರೀಪರ ಕಾಳಜಿ , ಸಾಕ್ಷರತಾ ಚಿಂತನೆ, ಆರ್ಥಿಕ ಚಿಂತನೆ, ಆರೋಗ್ಯ ಪರಚಿಂತನೆ, ಮನೋವೈಜ್ಞಾನಿಕ ಚಿಂತನೆ ಇನ್ನೂ ಮುಂತಾದ ಹಲವು ಬಗೆಯ ಅಭಿವ್ಯಕ್ತಿ ಸಾಧ್ಯತೆಗಳನ್ನು ಹೊಂದಿರುವ ವಚನ ಸಾಹಿತ್ಯ ಇಂದಿನ ಜಾಗತೀಕರಣ, ಉದಾರಿಕರಣ, ಖಾಸಗಿಕರಣಗಳ ಸಂದರ್ಭದಲ್ಲಿಯೂ ಜೀವಪರ ಚಿಂತನೆಯ ಒಳನೋಟಗಳಿಂದ ಪ್ರಸ್ತುತವೆನಿಸುತ್ತಿದೆ.

ಭಾರತೀಯ ಸಮಾಜ–ಸಂಸ್ಕೃತಿ–ಸಂಪ್ರದಾಯಗಳು ಇತಿಹಾಸದ ಉದ್ದಕ್ಕೂ ಹೆಣ್ಣನ್ನು ನಡೆಸಿಕೊಂಡ ರೀತಿ ಮತ್ತು ದೃಷ್ಟಿಕೋನಗಳು ಸ್ತ್ರೀವಾದದ ಹುಟ್ಟಿಗೆ ಕಾರಣವಾಯಿತು. ವಚನ ಚಳುವಳಿಯು ಸಂದರ್ಭದಲ್ಲಿ ಹೆಣ್ಣಿನ ಬಗೆಗೆ ಉದಾರವಾದ ನಿಲುವುಗಳು ರೂಪಗೊಂಡಿದ್ದು ಅಂದಿನ ಸ್ತ್ರೀಯರು ಉಸಿರುಗಟ್ಟಿದ್ದ ವಾತಾವರಣದಿಂದ ಹೊರಬರಲು ಸಾಧ್ಯವಾಯಿತು. ಬಸವಣ್ಣನವರ ಮಾರ್ಗದಲ್ಲಿ ಆರಂಭಗೊಂಡ ಭಕ್ತಿಚಳುವಳಿ ಸಾಮಾಜಿಕ ಅಸಮಾನತೆಯ ಅಮಾನವೀಯ ನೆಲೆಗಳನ್ನು ಪ್ರತಿಭಟಿಸಿದ್ದಲ್ಲದೆ ವರ್ಗ, ವರ್ಣ, ಲೈಂಗಿಕ ತಾರತಮ್ಯಗಳ ಜೊತೆಗೆ ಹೆಣ್ಣು ಗಂಡುಗಳ ನಡುವಿನ ಅಸಮಾನತೆಯನ್ನು ಪ್ರತಿಪಟಿಸಿದರು.

ಮಹಿಳಾ ವಿಮೋಚನೆಯು ಶರಣರ ಸಮಗ್ರ ಕ್ರಾಂತಿಯ ಒಂದು ಭಾಗವಾಗಿದ್ದು ಸ್ತ್ರೀಯರನ್ನು ಸಂಕೋಲೆಗಳಿಂದ ಬಂಧಿಸಲಾಗಿದ್ದ ಅರ್ಥರಹಿತವಾದ ವೈದಿಕ ಸಂಪ್ರದಾಯ ಮತ್ತು ಕಂದಾಚಾರಗಳ ವಿರುದ್ಧ ತಮ್ಮ ಧ್ವನಿಯನ್ನು ಎತ್ತಿದರು. ಪರಂಪರಾಗತವಾಗಿ ಪುರುಷ ಸಮಾಜದಲ್ಲಿ ಧಾರ್ಮಿಕ ಕಟ್ಟಲೆಗಳಲ್ಲಿ ಬಂಧಿಯಾಗಿದ್ದ ಸ್ತ್ರೀಯರನ್ನು ವಿಮುಕ್ತಿಗೊಳಿಸಿದ ಮೊದಲ ಸ್ಥಾನ ವಚನಕಾರರಿಗೆ ಸಲ್ಲುತ್ತದೆ. ಈ ಹಿನ್ನಲೆಯಲ್ಲಿ ವಚನಕಾರರು ರಚಿಸಿದ ಹಲವಾರು ವಚನಗಳನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ. ದೇವರದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಡೋಹಾರ ಕಕ್ಕಯ್ಯ, ಆಯ್ದಕ್ಕಿ ಮಾರಯ್ಯ, ಅಕ್ಕಮಹಾದೇವಿ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವ, ಸಂಚಿಯ ಹೊನ್ನಮ್ಮ, ಗೊಗ್ಗವ್ವೆ, ಸತ್ಯಕ್ಕ, ಇನ್ನು ಹಲವಾರು ವಚನಕಾರರ ವಚನಗಳಲ್ಲಿ ಸ್ತ್ರೀವಾದದ ನೆಲೆಗಳು ಅಭಿವ್ಯಕ್ತಗೊಂಡಿವೆ.

12ನೇ ಶತಮಾನವು ವಚನ ಸಾಹಿತ್ಯ ರಚನೆಯಲ್ಲಿ ಒಂದು ಪ್ರಗತಿಪರವಾದ ಘಟ್ಟ. ಸಾಮಾಜಿಕ ಸುಧಾರಣೆಯ ಸಂದರ್ಭದಲ್ಲಿ ರಚನೆಯಾದ ಶರಣ ಸಾಹಿತ್ಯ ಸ್ತ್ರೀ ಸಂವೇದನೆಯ ನೆಲೆಯಲ್ಲಿ ಪ್ರಕಟವಾದವು. ಸ್ತ್ರೀಯರಿಗೆ ಆತ್ಮವಿಶ್ವಾಸ ಸಮಾನತೆಯನ್ನು ಅಭಿವ್ಯಕ್ತಿಸುವ ಅವಕಾಶವನ್ನು ಒದಗಿಸಿದ್ದು ಇದೇ ಸಂದರ್ಭದಲ್ಲಿ. ಅಲ್ಲದೆ "ಆತ್ಮಯಾವ ಕುಲ ಜೀವಯಾವ ಕುಲ ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡು ಅಲ್ಲ" ಎಂಬ ನಿಲುವನ್ನು ಪ್ರಸ್ತುತಪಡಿಸಿದ ವಚನಕಾರರು ಸ್ತ್ರೀಯರಿಗೆ ಅನುಭವ ಮಂಟಪಕ್ಕೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟರು. ಹೆಣ್ಣುಗಂಡು ಎಂಬುವವವು ಪ್ರಾಕೃತಿಕ ಸತ್ಯಗಳಾಗಿರುವ ಜೈವಿಕ ಭಿನ್ನತೆಗಳ ಹೊರತು ದೇಹರಚನೆಯ ವೈಶಿಷ್ಟ್ಯಗಳು ಮತ್ತು ಲಕ್ಷಣಗಳು ಅಲ್ಲ. ಹಾಗೆಯೇ ಗಂಡು ಹೆಣ್ಣು ಇಬ್ಬರಲ್ಲಿಯೂ ಅಂತರಗತವಾಗಿರುವ ಆತ್ಮ ಲಿಂಗತೀತವಾದದು ಎಂಬ ವಾಧವನ್ನು ಮಂಡಿಸಿದ್ದಾರೆ.

ದಾಸಿಮಯ್ಯನವರು ಧರ್ಮಪರ ಚಿಂತನೆಯಲ್ಲಿ ಹೆಣ್ಣುಗಿರುವ ಪ್ರಾಶಸ್ತ್ಯವನ್ನು ಸ್ತ್ರೀ–ಪುರುಷ ಸಮಾನತೆಯ ತತ್ವದ ಪ್ರತಿಪಾದನೆಯನ್ನು ಎತ್ತಿ ಹಿಡಿದಿದ್ದಾರೆ.

"ಸತಿ–ಪತಿಗಳೊಂದಾದ ಭಕ್ತಿ, ಹಿತವಾಗಿಪ್ಪದು ಶಿವಂಗೆ
ಸತಿ–ಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ ಕಾಣಾ ರಾಮನಾಥ"[1]

ಎಂದು ಹೇಳುವ ದಾಸಿಮಯ್ಯನವರು ಧರ್ಮದಿಂದ ದೂರವಿಟ್ಟಿರುವ ಮಹಿಳೆಯನ್ನು ಧಾರ್ಮಿಕವಾಗಿ ಪ್ರಾಶಸ್ತ್ಯವನ್ನು ದಾಂಪತ್ಯ ತತ್ವದ ನೆಲೆಯಲ್ಲಿ ಎತ್ತಿ ಹಿಡಿದಿದ್ದಾರೆ. ಸತಿಪತಿಗಳಿಬ್ಬರು ಒಂದಾಗಿ ಸಮಾನವಾಗಿ ಶಿವನಿಗೆ ಪೂಜೆಯನ್ನು ಸಲ್ಲಿಸಿದರೆ ಅಮೃತವಿದ್ದಂತೆ, ಬದಲಾಗಿ

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಸತಿಪತಿಗಳು ಒಂದಾಗದೆ ಎಷ್ಟೇ ಭಕ್ತಿಯಿಚಿದ ಪೂಜೆಯನ್ನು ಮಾಡಿದರು ವಿಷವಿದ್ದಂತೆ ಎಂದು ಸತಿಪತಿಗಳ ದಾಂಪತ್ಯದ ಜೊತೆಗೆ ಧರ್ಮದ ನೆಲೆಯಲ್ಲಿ ಹೆಣ್ಣು ಪ್ರಬುದ್ಧಳಾಗುವಂತೆ ಪ್ರಾಶಸ್ತ್ಯವನ್ನು ನೀಡಿದ್ದಾರೆ. ಹಾಗೆಯೇ ಚಂದಿಮರಸನ "ಸ್ತ್ರೀಯಲ್ಲ ಪುರುಷನಲ್ಲ ನಪುಂಸಕನಲ್ಲ ಆತ್ಮನೆಂದರಿಯಬಹುದಲ್ಲದೆ, ಕಾಣಿಸಬಾರದು" ಎಂಬ ವಚನದಲ್ಲಿ ಸ್ತ್ರೀ ಪುರುಷ ಭೇದವನ್ನು ನಿರಾಕರಿಸುವ ಅದರಾಚೆಗಿನ ವ್ಯಕ್ತಿತ್ವವನ್ನು ಹುಡುಕುವ ಪ್ರಯತ್ನವಿಲ್ಲಿದೆ.

ಸಮಾಜದಲ್ಲಿ ಜೈವಿಕ ಸ್ಥಿತಿಯನ್ನೇ ಪ್ರಧಾನವಾಗಿರಿಸಿಕೊಂಡು ಸೃಷ್ಟಿಯಾಗಿದ್ದ ಸೂತಕ ಪರಂಪರೆಯ ಪರಿಕಲ್ಪನೆಯನ್ನು ಕಿತ್ತೋಗೆಯುವ ಮೂಲಕ ಲಿಂಗಭೇದವನ್ನು ಹೋಗಲಾಡಿಸಿದ್ದರು.

"ವೈದಿಕ ಪರಂಪರೆಯಲ್ಲಿ ಸ್ತ್ರೀ ಶೂದ್ರ ಸಮೀಕರಣದಿಂದ ಉಚಿಟಾದ ಸ್ತ್ರೀ ಸ್ವಾತಂತ್ರ್ಯಹರಣವನ್ನು ಶರಣರು ಪ್ರಕಾರವಾಗಿ ವಿರೋಧಿಸಿದರು. ಸ್ತ್ರೀ ಪುರುಷ ವಿಷಮ್ಯತೆಯ ಕುರಿತು ಹಲವಾರು ವಚನಗಳು ಜನಪ್ರಿಯವಾಗಿದ್ದ ಢಕ್ಕಯ್ಯ ಮಾರಯ್ಯನ ವಚನವು ಗಮನಾರ್ಹವಾಗಿದೆ.

"ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೇ ಎಂಬರು
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೇ?
ಪತಿಯಿಂದ ಬಂದ ಸೋಂಕು ಸತಿಯ ಕೆಡಲ್ಲವೇ?
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸಲೆ ಸಂದಿತ್ತು"

ಎಂದು ಪತಿಯ ಗುಣಗಳನ್ನು ಹೆಂಡತಿಯು ಏಕೆ ಪರೀಕ್ಷಿಸಬಾರದುಎಂದು ದಿಟ್ಟ ಸವಾಲನ್ನು ಪುರುಷ ಪ್ರಧಾನ ಶ್ರೇಷ್ಠ ಸಂಸ್ಕೃತಿಗೇನೆ–ಎಸೆಯುತ್ತಾನೆ ಮಾರಯ್ಯ"[2]

ಅಲ್ಲಮಪ್ರಭು ಸ್ತ್ರೀಯರನ್ನು ಮಾಯೆ ಎಂದು ಸಮಾಜದಲ್ಲಿ ದೂರ ತಳ್ಳಿರುವುದನ್ನು ನಿರಾಕರಿಸಿದ್ದಾರೆ. ಸ್ತ್ರೀ ಸೃಷ್ಟಿಯ ಸಂಕೇತವೆಂದು ತಿಳಿಸುತ್ತಾ ಮಾಯೆಂಬ ಮಿತಿಯಿಚಿದ ಹೆಣ್ಣನ್ನು ಪರಿಗಣಿಸಬಾರದೆಂದು ಹೇಳಿದ್ದಾರೆ. ಅಲ್ಲದೆ ಮಾಯೆ ಕ್ಷಣಿಕವಾಗಿ ಕಾಡುವುದೇ ಹೊರತು ನಿರಂತರವಾಗಿ ಬಂಧನಕ್ಕೀಡು ಮಾಡುವುದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಸ್ತ್ರೀ ಪರವಾದ ಚಿಂತನೆಯನ್ನು ಕಾಣಬಹುದಾಗಿದೆ.

"ಹೊನ್ನು ಮಾಯೆ ಎಂಬುವರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬುವರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬುವರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಗುಹೇಶ್ವರಾ"[3]

ಮಾನವನ ವಿಷಯಾಸಕ್ತ ವ್ಯಸನದ ಮನಸ್ಸು ಅವನನ್ನು ದಾರಿತಪ್ಪಿಸುತ್ತದೆ ಹೊರತು ಹೆಣ್ಣು, ಹೊನ್ನು, ಮಣ್ಣು, ಅಲ್ಲವೆಂದು ಹೇಳಿದ್ದಾರೆ. ಮಾನವನ ಮನಸ್ಸಿನಲ್ಲಿ ಉಂಟಾಗುವ ಆಸೆಯೆಂಬ ಮಾಯೆ ಎಲ್ಲದಕ್ಕೂ ಕಾರಣವೆಂದು ಹೇಳುವುದರ ಜೊತೆಗೆ ಹೆಣ್ಣಿನ ಬಗ್ಗೆ ಗೌರವವನ್ನು ತಾಳಿದ್ದಾರೆ. ಅದೇ ರೀತಿಯಾಗಿ ಸಿದ್ದರಾಮಯ್ಯನ "ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ದೇವತೆ ಕಫಲಸಿದ್ಧ ಮಲ್ಲಿಕಾರ್ಜುನ" ಎಂಬ ವಚನದಲ್ಲಿ ಸ್ತ್ರೀಗೆ ಗೌರವವನ್ನು ಸಲ್ಲಿಸುವುದಲ್ಲದೆ ದೈವ ಸ್ವರೂಪಿ ಮಟ್ಟಕ್ಕೆ ಹೋಲಿಸಿ ಔನತ್ಯವನ್ನು ಮೆರೆದಿದ್ದಾರೆ.

"ಹನ್ನೆರಡನೇ ಶತಮಾನದಲ್ಲಿ ಸ್ತ್ರೀ ಸಮಾನತೆಯಆಶಯಕ್ಕೆ ಪ್ರಖರ ಶಕ್ತಿಯೊದಗಿ ಬಂದದ್ದು ಶರಣ ಸಂಕುಲದಿಂದ. ಈ ಪರಿಸರದಲ್ಲಿ 30ಕ್ಕೂ ಹೆಚ್ಚಿನ ಸಂಖ್ಯೆಯ ವಚನಕಾರ್ತಿಯರು ಸ್ವಾತಂತ್ರ್ಯವಾಗಿ ತಮ್ಮ ವಿಚಾರಗಳನ್ನು ಅಭಿವ್ಯಕ್ತ ಪಡಿಸುವಷ್ಟು ಸಮರ್ಥರಾಗಿದ್ದರು ಎನ್ನುವುದನ್ನು ಸಂಶೋಧನೆ ಸಾರುತ್ತದೆ. ಅಂತಹ ಅನೇಕರಲ್ಲಿ 'ಗೋಗವ್ವೆ' ಒಬ್ಬಳು. ಶರಣರ ಸಹವಾಸಕ್ಕೆ ಬಂದ ಇವರು ಅನೇಕ ಸ್ತ್ರೀಪರ ಚಿಂತನೆಯ ವಚನಗಳನ್ನು ರಚಿಸಿರುವುದು ಕಂಡುಬರುತ್ತದೆ.

"ಗಂಡು ಮೋಹಿಸಿ ಹೆಣ್ಣು ಹಿಡಿದಡೆ
ಅದು ಒಬ್ಬರ ಒಡವೆ ಎಚಿದು ಅರಿಯಬೇಕು
ಹೆಣ್ಣು ನೋಯಿಸಿ ಗಂಡು ಹಿಡಿದರೆ
ಉತ್ತರವಾವುದೆಂದರಿಯಬೇಕು"

ಎಂದು ಪ್ರಶ್ನಿಸುತ್ತಲೇ ಗೋಗವ್ವೆ ಈ ಎರಡರ ಉಭಯವ ಕಳೆದು ಸುಖೀತಾನಾಗಬಲ್ಲಡೆ ನಾಸ್ತಿನಾಥನು ಪರಿಪೂರ್ಣನೆಂಬೆ ಎಂದು ಸ್ಪಷ್ಟಪಡಿಸಿತ್ತಾಳೆ."[4]

ಸರ್ವಜ್ಞನ ವಚನಗಳಲ್ಲಿ ಸ್ತ್ರೀ ಕುರಿತಾದ ಅನೇಕ ವಚನಗಳು ದೊರೆತಿದ್ದು ಹೆಣ್ಣಿಗೆ ಪುರುಷನಷ್ಟೇ ಸರಿಸಮನಾದ ಸ್ಥಾನವನ್ನು ಕಲ್ಪಿಸಿದ್ದಾರೆ. ಸಮಾಜದಲ್ಲಿ ಗಂಡು ಹೆಣ್ಣಿಗಿಂತ ಶ್ರೇಷ್ಠನೆಂಬ ಭ್ರಮೆಯಲ್ಲಿದ್ದು ಹೆಣ್ಣನ್ನು ಶೋಷಣೆ ಮಾಡುತ್ತಿದ್ದಾನೆ ಇಂತಹ ಗಂಡಸರಿಗೆ ಹೆಣ್ಣಿನ ಶ್ರೇಷ್ಠತೆ ಮತ್ತು ಅವಳ ಸ್ಥಾನದ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ವಜ್ಞನ ವಚನ ಪ್ರಮುಖವಾಗಿದೆ.

"ಹೆಣ್ಣಿಂದ ಇಹವುಂಟು ಹೆಣ್ಣಿಂದ ಪರವುಂಟು

ಹೆಣ್ಣಿಂದ ಸಕಲ ಫಲವುಂಟು ॥ಮರೆದರೆ
ಹೆಣ್ಣಿಂದ ಮರಣ ಸರ್ವಜ್ಞ॥"

ಎಂದು ಹೇಳುವ ಸರ್ವಜ್ಞನುಗಂಡು ಶ್ರೇಷ್ಠ ಹೆಣ್ಣು ಕನಿಷ್ಠ ಎನ್ನುವ ಮಾನವರಿಗೆ ಹೆಣ್ಣಿನ ಶ್ರೇಷ್ಠತೆಯನ್ನು ತಿಳಿಸಿದ್ದಾರೆ. ಗಂಡಸರ ಬದುಕಿನಲ್ಲಿ ಸಿರಿ–ಸಂಪತ್ತು, ಭೋಗ–ಭಾಗ್ಯಗಳು, ಪದವಿ–ಸಂಪತ್ತುಗಳು ದೊರೆತಿದ್ದರೆ ಅವು ಕೇವಲ ಹೆಣ್ಣಿನ ಫಲ ಮತ್ತು ಪ್ರೋತ್ಸಾಹದಿಂದ ಹೊರೆತು ಗಂಡನ ಒಂಟಿ ಪ್ರಯತ್ನದಿಂದ ಅಲ್ಲವೆಂದು ಹೇಳಿದ್ದಾರೆ. ಅಂದರೆ 'ಪ್ರತಿಯೊಬ್ಬ ಗಂಡಸನ ಸಾಧನೆಯ ಹಿಂದೆ ಹೆಣ್ಣು ಇರುತ್ತಾಳೆ' ಎಂಬ ಗಾಧೆಯೂ ಇಲ್ಲಿ ನೀಜವಾಗಿದೆ. ಆದ್ದರಿಂದ ಮನೆಯಲ್ಲಿರುವ ಹೆಣ್ಣನ್ನು ಸುಖ ಸಂತೋಷದಿಂದ ನೋಡಿಕೊಂಡರೆ ಇಹ ಮತ್ತು ಪರಗಳ ಜೊತೆಗೆ ಸಕಲ ಸಂಪತ್ತುಗಳು ದೊರೆಯುತ್ತವೆ. ಬದಲಾಗಿ ಹೆಣ್ಣನ್ನು ತಿರಸ್ಕರಿಸಿ ಹಿಂಸೆಯನ್ನು ನಿಡಿದರೆ ಇದರಿಂದ ಮುನಿಸಿಕೊಂಡ ಹೆಣ್ಣಿನಿಂದ ಮರಣ ಸಂಭವಿಸುತ್ತದೆ. ಅದ್ದರಿಂದ ಹೆಣ್ಣನ್ನು ಗೌವಿಸಬೇಕೆಂಬ ಮಾತುಗಳ ಮೂಲಕ ಸಮಾಜ ಮತ್ತು ಕುಟುಂಬದಲ್ಲಿ ಹೆಣ್ಣಿನ ಸ್ಥಾನಮಾನವನ್ನು ವಿವರಿಸಿದ್ದಾರೆ.

ಹನ್ನೆರಡನೇ ಶತಮಾನದ ಸಮಾಜದಲ್ಲಿ ಪುರುಷ–ಸ್ತ್ರೀ, ಪ್ರಭು–ಪ್ರಜೆ, ಬ್ರಾಹ್ಮಣ–ಶೂದ್ರದಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದ ಸಂಸ್ಕೃತಿಯು ನಿರ್ಮಾಣವಾಗಿದ್ದ ಸಂದರ್ಭದಲ್ಲಿ ವಚನಕಾರರು ತಮ್ಮ ವಚನಗಳ ಮೂಲಕ ಸಮಾಜದಲ್ಲಿದ್ದ ತಾರತಮ್ಯಗಳನ್ನು ಹೋಗಲಾಡಿಸಿ ಸಮ ಸಮಾಜಕ್ಕಾಗಿ ಚಳುವಳಿಗಳನ್ನು ಹಮ್ಮಿಕೊಂಡರು. ಜೊತೆಗೆ ಹೊಸ ಸಮಾಜದ ನೆಲೆಗಳನ್ನು ಗುರಿಯಿಟ್ಟುಕೊಂಡು ವಚನಗಳನ್ನು ರಚಿಸಿದ್ದಾರೆ. ಈ ಹಿನ್ನಲೆಯಲ್ಲಿ ರಚನೆಗೊಂಡ ಹಲವು ವಚನಗಳಲ್ಲಿ ಸ್ತ್ರೀಗೆ ಪುರುಷನಷ್ಟೇ ಅಧಿಕಾರ ಮತ್ತು ಸ್ವಾತಂತ್ರ್ಯವಿದೆಯೆಂದು ಸ್ತ್ರೀವಾದದ ನೆಲೆಗಳನ್ನು ಅಭಿವ್ಯಕ್ತಿಸಿದ್ದಾರೆ. ಈ ನೆಲೆಯಲ್ಲಿ ವಚನಕಾರರು ಕೈಗೊಂಡ ಜನಪರ ಆಂದೋಲನಗಳು ನಮ್ಮ ದೇಶದ ಇತಿಹಾಸದಲ್ಲೇ ಒಂದು ವಿಶಿಷ್ಟ ಘಟನೆಯಾಗಿ ಸ್ಥಿರವಾಗಿ ನಿಂತಿದೆ ಎಚಿದರೆ ತಪ್ಪಾಗಲಾರದು.

### ಕೊನೆ ಟಿಪ್ಪಣಿಗಳು

1. ದೇವರ ದಾಸಿಮಯ್ಯನ ವಚನ:ಸಂ– ಸಿ.ಭೂಸನೂರ ಮಠ, ವಚನ ಸಾಹಿತ್ಯ ಸಂಗ್ರಹ ಪುಟ ಸಂಖ್ಯೆ. 612
2. ವಚನ ವೈಭವ: ಶಂಕರ ಮ. ಪಾಟೀಲ ಸಂಗಮ ಪ್ರಕಾಶನ, ಕೊಲ್ಲಾಪುರ–416018, ಮಹಾರಾಷ್ಟ್ರ. ಪುಟ ಸಂಖ್ಯೆ. 59. 2013
3. ಸಮಗ್ರ ವಚನ ಸಂಪುಟ : ಸಂ : ಬಿ.ವಿ ಮಲ್ಲಾಪುರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಪುಟ ಸಂ. 25, 1996
4. ನಡುಗನ್ನಡ ಸಾಹಿತ್ಯ: ಡಾ ಪ್ರೇಮ್ ಚಂದ್ ಚವ್ಹಾಣ, ಉದಿಯೋನ್ಮುಖ ಯುವ ಬರಹಗಾರರ ಬಳಗ ಕಲಬುರ್ಗಿ, ಪುಟ ಸಂ. 25, 2021

### ಪರಾಮರ್ಶನ ಕೃತಿಗಳು

1. ದೇವರ ದಾಸಿಮಯ್ಯನ ವಚನ ಸಮ್ ಸಿ ಭೂಸನೂರು ಮಠ ವಚನ ಸಾಹಿತ್ಯ ಸಂಗ್ರಹ
2. ವಚನ ವೈಭವ: ಶಂಕರ ಮ. ಪಾಟೀಲ ಸಂಗಮ ಪ್ರಕಾಶನ, ಕೊಲ್ಲಾಪುರ–416018, ಮಹಾರಾಷ್ಟ್ರ. 2013
3. ಸಮಗ್ರ ವಚನ ಸಂಪುಟ :ಸಂ: ಬಿ.ವಿ ಮಲ್ಲಾಪುರ , ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. 1996
4. ನಡುಗನ್ನಡ ಸಾಹಿತ್ಯ: ಡಾ ಪ್ರೇಮ್ ಚಂದ್ ಚವ್ಹಾಣ, ಉದಿಯೋನ್ಮುಖ ಯುವ ಬರಹಗಾರರ ಬಳಗ ಕಲಬುರ್ಗಿ, ಪುಟ ಸಂ. 25, 2021
5. ವಚನ ಸಾಹಿತ್ಯ ಮತ್ತು ಸಂಸ್ಕೃತಿ : ಡಾ.ಎಸ್.ಎನ್.ಅಂಗಡಿ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು 40, 2013
6. ಬಸವ ಮತ್ತುದಲಿತೋದಯ : ಬಸವ ಸಮಿತಿ, ಬಸವೇಶ್ವರ ವೃತ್ತ ಬೆಂಗಳೂರು. 1984
7. ಬಸವಯುಗದ ವಚನ ಮಹಾ ಸಂಪುಟ : ಡಾ.ಎಂ.ಎಂ ಕಲಬುರ್ಗಿ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. 2016